ಕರ್ನಾಟಕ ವಿಧಾನ ಸಭೆ
ಶುಕ್ರವಾರ 30ನೇ ನವೆಂಬರ್ 1990
ಮಾರ್ಗಶಿರ 9, ಶಕ 1912

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 9–30 ಗಂಟೆಗೆ ಸಮಾವೇಶಗೊಂಡಿತು

[**ಉಪಾಧ್ಯಕ್ಷರು :** (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದರು]

ಸಂತಾಪ ಸೂಚನೆ

ಉಪಾಧ್ಯಕ್ಷೆಣಿಯವರು : ವಿಧಾನ ಸಭೆಯ ಮಾಜಿ ಸದಸ್ಯರಾದ ಡಾ; ಎನ್.ಕೆ. ನಾಯಕ್‌ರವರು ತಾ: 25–11–90 ರಂದು ನಿಧನರಾದರೆಂದು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು 1962 ರಿಂದ 1967ರ 3ನೇ ವಿಧಾನಸಭೆಗೆ ಮುಧೋಳ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಇವರು ವೃತ್ತಿಯಲ್ಲಿ ವೈದ್ಯರಾಗಿದ್ದು ಶಿಕ್ಷಣ ಮತ್ತು ಸಹಕಾರ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿರುವುದರ ಜೊತೆಗೆ ಮುಧೋಳ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಕೀರ್ತಿ ಇವರದ್ದಾಗಿರುತ್ತದೆ.

ಮೃತರ ಗೌರವಾರ್ಥ ಮಾನ್ಯ ಸಭೆಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು.)

ಉಪಾಧ್ಯಕ್ಷೆಣಿಯವರು :– ದಿವಂಗತರ ಕುಟುಂಬದವರಿಗೆ ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸಿಕೊಡಲಾಗುವುದು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಚ.ಪ್ರ. 174 (508

ಉಪಾಧ್ಯಕ್ಷೆಣಿಯವರು :– ಮಾನ್ಯ ಸಿದ್ದನ ಗೌಡರ್‌ರವರ ಪ್ರಶ್ನೆಯನ್ನು ಮಾನ್ಯ ಕೌಜಲಗಿಯವರಿಗೆ ಆಥರೈಸ್ ಮಾಡಲಾಗಿದೆ. ಆದರೆ ಅವರ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

ಶಿವರಾಮೇಗೌಡರೇ, ತಮ್ಮ ಚು ಪ್ರ. 178 (589)ಗೂ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ. ಮುಂದೆ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಮ್ಮ ಪ್ರಶ್ನೆಗಳು ಬರುವುದೇ ಅಪರೂಪ. ಈ ರೀತಿ ಅಪರೂಪಕ್ಕೆ ಬಂದಂತ ಸಂದರ್ಭದಲ್ಲೂ ಈ ರೀತಿ ಹಾರಿಕೆಯ ಉತ್ತರವನ್ನು ಸರ್ಕಾರದವರು ಕೊಟ್ಟರೆ ಹೇಗೆ ಈ ತಾಪತ್ರಯ ಇನ್ನೂ ತಪ್ಪಲಿಲ್ಲವಲ್ಲಾ. ನಾನು ಸುಮಾರು 120 ಪ್ರಶ್ನೆಗಳನ್ನು ಈ ಅಧಿವೇಶನದಲ್ಲಿ ಕಳುಹಿಸಿದ್ದೇನೆ. 8–10 ದಿವಸ ಆದಮೇಲೆ ಇವತ್ತು ಈ ಒಂದು ಪ್ರಶ್ನೆ ಬಂದಿರುವುದನ್ನು ನೋಡುತ್ತಿದ್ದೇನೆ. ಆದರೆ ಇದಕ್ಕೆ ಸರ್ಕಾರದಿಂದ ಉತ್ತರ ಇಲ್ಲ ಎಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ತೀವ್ರ ಕ್ರಮ ತೆಗೆದುಕೊಳ್ಳಬೇಕು. ತಾವು ಸರ್ಕಾರಕ್ಕೆ ಸ್ಪಷ್ಟ ಆದೇಶವನ್ನು ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶಿಗ್ಗಾಂವ ನಗರದಲ್ಲಿ ಮುನ್ಸೀಫ್ ನ್ಯಾಯಾಲಯ ತೆರೆಯುವ ಬಗ್ಗೆ

594. **ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) :–** ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ನಗರದಲ್ಲಿ ಮುನ್ಸೀಫ್ ಮತ್ತು ಜೆ.ಎಂ.ಎಫ್‌ಸಿ ನ್ಯಾಯಾಲಯ ತೆರೆಯುವ ಉದ್ದೇಶವೇನಾದರೂ ಸರ್ಕಾರದ ಮುಂದಿದೆಯೆ?

ಆ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಸದರಿ ನ್ಯಾಯಾಲಯ ಪ್ರಾರಂಭವಾಗುವುದು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ಹೌದು.

ಆ) ಸರ್ಕಾರ ಪರಿಶೀಲಿಸಿ ದೊರೆಯುವ ಸಂಪನ್ಮೂಲಗಳನ್ನು ಅನುಸರಿಸಿ, ಹೊಸ ನ್ಯಾಯಾಲಯಗಳನ್ನು ಪ್ರಾರಂಭಿಸಲಾಗುವುದು.

ಶ್ರೀ ಮಂಜುನಾಥ ಸಿ ಕುನ್ನೂರು : ಸನ್ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ್ ನಗರದಲ್ಲಿ ಮುನ್ಸೀಫ್ ಜೆ.ಎಂ.ಎಫ್.ಸಿ. ನ್ಯಾಯಾಲಯ ತೆರೆಯಬೇಕೆಂದು ಕೇಳಿದ್ದೇನೆ. ಈ ಒಂದು ನ್ಯಾಯಾಲಯವನ್ನು ತೆರೆಯಬೇಕೆಂಬ ಉದ್ದೇಶ ಸುಮಾರು 7–8 ವರ್ಷಗಳಿಂದ ಸರ್ಕಾರಕ್ಕಿದ್ದರೂ, ಇಲ್ಲಿಯವರೆಗೆ ಪ್ರಾರಂಭ ಮಾಡಿಲ್ಲ. ಧಾರವಾಡ ಜಿಲ್ಲಾ ನ್ಯಾಯಾಧೀಶರು ಶಿಗ್ಗಾಂವ್ ನಗರದಲ್ಲಿ ಒಂದು ಕಟ್ಟಡವನ್ನು ನೋಡಿ ಈಗಾಗಲೇ ಇದರ ಬಗ್ಗೆ ಹೈಕೋರ್ಟ್‌ಗೆ ಶಿಫಾರಸ್ಸು ಮಾಡಿದ್ದಾರೆ. ಇದರ ಜೊತೆಗೆ ಮಂಜೂರಾದ 7–8 ಕೋರ್ಟ್‌ಗಳು ಬೇರೆ ಬೇರೆ ಕಡೆಯಲ್ಲಿ ಸ್ಥಾಪನೆಯಾಗಿದೆ. ಆದರೆ, ಶಿಗ್ಗಾಂವ್ ನಗರದಲ್ಲಿ ಈ ಕೋರ್ಟನ್ನು ಸ್ಥಾಪನೆ ಮಾಡುವುದಕ್ಕೆ ಏಕೆ ವಿಳಂಬವಾಗುತ್ತಿದೆ? ಇದಕ್ಕೆ ಮಾನ್ಯ ಕಾನೂನು ಮಂತ್ರಿಯವರು ದಯಮಾಡಿ ಉತ್ತರಿಸುವರೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):– ಶಿಗ್ಗಾಂವ್‌ನಲ್ಲಿ ಮುನ್ಸೀಫ್ ಕೋರ್ಟ್ ಕೊಡಬೇಕೆಂಬ ಉದ್ದೇಶ ಇದೆ. ಈ ವರ್ಷ ಬಡ್ಜೆಟ್‌ನಲ್ಲಿ ಹಣದ ಅಭಾವವಿರುವುದರಿಂದ ಶಿಗ್ಗಾಂವ್‌ನಲ್ಲಿ ಈ ಕೋರ್ಟನ್ನು ಕೊಡಲಾಗಲಿಲ್ಲ. ಆದರೂ ಕೂಡ ಈ ವರ್ಷ ಮೂರು ಮುನ್ಸೀಫ್ ಕೋರ್ಟ್‌ಗಳನ್ನು ಕೊಡುತ್ತಿದ್ದೇವೆ. ಒಂದು ದಕ್ಷಿಣ ಕನ್ನಡ ಜಿಲ್ಲೆಗೆ, ಎರಡನೆಯದು ಕೋಲಾರಕ್ಕೆ ಹಾಗೂ ಮೂರನೆಯದು ಸಂಡೂರಿಗೆ. ಆದ್ಯತೆ ಮೇಲೆ ಶಿಗ್ಗಾಂವ್‌ನಲ್ಲಿ ಮುನ್ಸೀಫ್ ಕೋರ್ಟನ್ನು ಪ್ರಾರಂಭಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ನಾನು ಕೊಡಲಿಚ್ಛೆಸುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಮಾರ್ಚ್ ತಿಂಗಳೊಳಗಾಗಿ ಶಿಗ್ಗಾಂವ್‌ನಲ್ಲಿ ಮುನ್ಸೀಫ್ ಕೋರ್ಟನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ:– ಆಯಿತು, ಪರಿಶೀಲಿಸುತ್ತೇನೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಾಲ ಸೌಲಭ್ಯ

641. ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಮಾಗಡಿ ತಾಲ್ಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಾಲದ ಮಂಜೂರಾತಿ ಪಡೆದಿರುವ ಜನಗಳ ಸಂಖ್ಯೆ ಎಷ್ಟು;

ಆ) ಯಾವ ಆಧಾರದ ಮೇಲೆ ಸಾಲವನ್ನು ಮಂಜೂರು ಮಾಡಲಾಗಿದೆ?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) 1989–90ನೇ ಸಾಲಿನಲ್ಲಿ 106 ಜನರು ಸಾಲದ ಮಂಜೂರಾತಿ ಪಡೆದಿರುತ್ತಾರೆ.

ಆ) ಬಡತನದ ರೇಖೆಯಿಂದ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರನ್ನು ನಿಗಮ ಆಯ್ಕೆ ಮಾಡಿದ ಗೊಂಚಲು ಗ್ರಾಮಗಳಲ್ಲಿ ಬ್ಯಾಂಕ್ ಅಧಿಕಾರಿಗಳ ಹಾಗೂ ನಿಗಮದ ಅಧಿಕಾರಿಗಳ ಜೊತೆ ಜಂಟಿಯಾಗಿ ನಿಗಮದ ನಿಯಮಾವಳಿಗಳ ಪ್ರಕಾರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಬ್ಯಾಂಕ್ ಹಾಗೂ ನಿಗಮದಿಂದ ಸೌಲಭ್ಯ ಒದಗಿಸಲಾಗಿದೆ.

ಶ್ರೀ ಹೆಚ್.ಎಂ. ರೇವಣ್ಣ : ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರ ನೂರಾರು ಕೋಟಿ ರೂಪಾಯಿಗಳನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದಲ್ಲಿ ತೊಡಗಿಸಿದ್ದು ಮಾಗಡಿ ತಾಲ್ಲೂಕ್‌ನಲ್ಲಿ ಕೇವಲ ನೂರಾರು ಜನರಿಗೆ ಮಾತ್ರ ಈ ಸಾಲದ ಸೌಲಭ್ಯವನ್ನು ಒದಗಿಸಿದ್ದಾರೆ, ಇರುವಂಥ ಪ್ರಜಾಸಂಖ್ಯೆಗನುಗುಣವಾಗಿ ಈ ಸಾಲ ವಿತರಣೆಯಾಗಿಲ್ಲ. ಈ ನಿಗಮದಲ್ಲಿ ವಿತರಣೆಯಾಗದೆ ಪ್ರತಿ ವರ್ಷವೂ ಸಾಕಷ್ಟು ಹಣ ಉಳಿಯುತ್ತಿದೆ. ಆದುದರಿಂದ ಈ ನಿಗಮದ ಸಂಬಂಧಪಟ್ಟ ಅಧಿಕಾರಿಗಳನ್ನು ಚುರುಕುಗೊಳಿಸಿ, ಸರ್ಕಾರ ಯಾವ ಉದ್ದೇಶದಿಂದ ಈ ನಿಗಮದಲ್ಲಿ ಹಣವನ್ನು ತೊಡಗಿಸಿದೆಯೋ, ಅದು ಸದ್ವಿನಿಯೋಗವಾಗುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುವರೇ ಎಂದು ಸರ್ಕಾರವನ್ನು ಕೇಳಬಯಸುತ್ತೇನೆ.